# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

## ಎಸ್.ಸಿ. ನಂ. 36/2014

**ದೋ.ಸಾ. : 12 ಪ್ರಾ.ಸಾ. : 07**

| | | |
|---|---|---|
| ಸಾಕ್ಷಿಯ ಹೆಸರು | : | ವಿಜಯಾ ರಾಜಗೋಪಾಲ |
| ಗಂಡನ ಹೆಸರು | : | ರಾಜಗೋಪಾಲ |
| ವಯಸ್ಸು | : | 47 ವರ್ಷ |
| ಕೆಲಸ | : | ಗೃಹಿಣಿ |
| ವಾಸ | : | ರಾಜೀವ ನಗರ, ಕದ್ರಾ, ಕಾರವಾರ |

**ದಿನಾಂಕಃ 15-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2014 ನೇ ಇಸ್ವಿಯಲ್ಲಿ ಒಂದು ದಿನ ಕದ್ರಾ ಪೋಲಿಸರು ನನ್ನನ್ನು ಪೋಲಿಸ್ ಠಾಣೆಗೆ ಪಂಚನಾಮೆಗೆ ಕರೆಸಿದ್ದರು. ಆ ದಿನ ಸಂಜೆ ನಾನು ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಅಲ್ಲಿ ಪೊಲೀಸರು ಮೃತ ವೇಲು ರವರ ಮಗಳಾದ ಮೃತೆ ಅಶ್ವಿನಿಯ ಬಟ್ಟೆಗಳನ್ನು ತಂದು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ್ದು, ಅವುಗಳನ್ನು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಜಪ್ತುಪಡಿಸಿಕೊಂಡರು ಹಾಗೂ ಸದರಿ ಪಂಚನಾಮೆಗೆ ನನ್ನ ಸಹಿಯನ್ನು ಪಡೆದುಕೊಂಡರು. ನಿಪಿ-21 ಜಪ್ತು ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-21(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲದಲ್ಲಿ ಪೋಲಿಸರು ಮೃತೆ ಅಶ್ವಿನಿಯ ಬಟ್ಟೆಗಳಾದ ಒಂದು ಫ್ರಾಕ್, ಒಂದು ಒಳ ಫ್ರಾಕ್, ಒಂದು ಚಡ್ಡಿ ಯನ್ನು ಜಪ್ತಪಡಿಸಿಕೊಂಡಿದ್ದು, ಸದರಿ ಬಟ್ಟೆಗಳಿಗೆ ರಕ್ತ ತಾಗಿರುತ್ತದೆ. ಸದರಿ ಬಟ್ಟೆಗಳನ್ನು ಈಗಾಗಲೇ ಮುದ್ದೆ ಮಾಲು-14 ರಿಂದ 16 ಎಂದು ಗುರುತಿಸಲಾಗಿರುತ್ತದೆ. ಮುದ್ದೆ ಮಾಲು-14 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದುಸಿ, ಅದನ್ನು ಮುದ್ದೆಮಾಲು-14(ಬಿ) ಎಂದು ಗುರುತಿಸಲಾಯಿತು. ಮುದ್ದೆಮಾಲು-15 ಮತ್ತು 16 ರ ಮೇಲೆ ಅಂಟಿಸಿರುವ ಚೀಟಿಗಳು ಹಾಳಾಗಿರುತ್ತವೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ</u>**

2. ಪಂಚನಾಮೆಗೆ ಬರಲು ಪೊಲೀಸರು ನನಗೆ ನೋಟಿಸ್ ನೀಡಿರುತ್ತಾರೆ. ಪೊಲೀಸರು ನನಗೆ ನೋಟಿಸ್ ನೀಡಿದಾಗ ನಾನು ನಮ್ಮ ಮನೆಯಲ್ಲಿದ್ದೆ. ನೋಟಿಸ್ ಮೇಲೆ ಪೊಲೀಸರು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಹಿ ಪಡೆದುಕೊಂಡ ಪೊಲೀಸರ ಹೆಸರು ನನಗೆ ಗೊತ್ತಿಲ್ಲ ಹಾಗೂ ನೋಟಿಸ್ ಜೊತೆಗೆ 2 ದಾಖಲೆಗಳ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ 2 ದಾಖಲೆಗಳ ಮೇಲೆ ಏನು ಬರೆದಿದೆ ಎಂದು ನನಗೆ ಈಗ ನೆನಪಿಲ್ಲ. ಈ ದಿನ ತೋರಿಸಿದ ನನ್ನ ಸಹಿಗಳು ನಾನು ಆ ದಿನ ನೋಟಿಸ್ ನೊಂದಿಗೆ ಮಾಡಿದ ಸಹಿಗಳು ಆಗಿರುತ್ತವೆ. ಫ್ರಾಕ್ ಗಳ ಮೇಲೆ ಸೀಲ್ ಮಾಡಿದ್ದನ್ನು ನಾನು ನೋಡಿರುವುದಿಲ್ಲ. ಸದರಿ ಬಟ್ಟೆಗಳ ಅಳತೆ, ಬಣ್ಣ, ಕಂಪನಿಯನ್ನು ನೋಡಿರುವುದಿಲ್ಲ. ಮುದ್ದೆಮಾಲು–14 ರಿಂದ 16 ಗಳನ್ನು ಇದೇ ಮೊದಲಬಾರಿಗೆ ನ್ಯಾಯಾಲಯದ ಮುಂದೆನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕದ್ರಾ ಪೊಲೀಸ್ ಠಾಣೆಗೆ ಎಂದಿಗೂ ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ಬಟ್ಟೆಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು–14 ರಿಂದ 16 ಬಟ್ಟೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಸುಳ್ಳು ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ